ಎ-72-23

ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಅರುಣ ಶಹಾಪುರ ರವರು ನಿಯಮ-72ರ ಅಡಿಯಲ್ಲಿ ನೀಡಿರುವ ಸೂಚನಾ ಪತ್ರಕ್ಕೆ ಉತ್ತರ.

ವಿಷಯ

ಪದವಿ ಪೂರ್ವ ವೃತ್ತಿ ಶಿಕ್ಷಣ ಇಲಾಖೆ ಜೆ.ಓ.ಸಿ ಯಲ್ಲಿ ಸೇವೆ ಸಲ್ಲಿಸಿ ವಿಲೀನ ವಂಚಿತ 530 ಜನ ಬೋಧಕ ಮತ್ತು ಬೋಧಕೇತರರನ್ನು ಖಾಯಂಮಾತಿ ಮಾಡುವಂತೆ ವಿಲೀನ ವಂಚಿತ ನೌಕರರು ಅನೇಕ ವರ್ಷಗಳಿಂದ ಹೋರಾಟ ಮಾಡುತ್ತಿದ್ದಾರೆ. 3746 ಅರೆಕಾಲಿಕ ಸಿಬ್ಬಂದಿಯನ್ನು ಖಾಯಂಗೊಳಿಸುವಂತೆ ದಿನಾಂಕ:08.03.2011ರ ಮುಖ್ಯಮಂತ್ರಿಯವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ತೀರ್ಮಾನವಾಗಿರುತ್ತದೆ. ಆದರೆ, ದಿನಾಂಕ:17.03.2011ರಂದು ಕೆಲವು ನಿಯಮಗಳನ್ವಯ 3216 ಸಿಬ್ಬಂದಿಗಳನ್ನು ಮಾತ್ರ ಖಾಯಂಮಾತಿ ಮಾಡಿರುತ್ತಾರೆ. ಇದರಿಂದಾಗಿ, 530 ಜನ ಸಿಬ್ಬಂದಿಗಳಿಗೆ ತೀವ್ರತರವಾದ ಅನ್ಯಾಯವಾಗಿರುತ್ತದೆ. ಆದಕಾರಣ, ಕೂಡಲೇ ಸರ್ಕಾರವು ವಿಧಿಸಿದ ನಿಯಮಗಳನ್ನು ಸಡಿಲಗೊಳಿಸಿ ಮಾನವೀಯತೆಯ ದೃಷ್ಟಿಯಿಂದ ಈ ಬಾಕಿ ಉಳಿದ ಸಿಬ್ಬಂದಿಗಳನ್ನೂ ಸಹ ಖಾಯಂಮಾತಿ ಮಾಡಬೇಕೆಂದು ಒತ್ತಾಯಿಸಿರುವ ಕುರಿತು.

ಉತ್ತರ

ಜೆ.ಓ.ಸಿ. ವಿಲೀನ ವಿಧೇಯಕ ಅಧಿಸೂಚನೆ ಸಂಖ್ಯೆ:ಸಂವ್ಯಶಾಇ:22:ಶಾಸನ2011: ದಿನಾಂಕ: 06/04/2011ರನ್ವಯ ದಿನಾಂಕ:06/04/2011ಕ್ಕೆ ಯಾವೊಬ್ಬ. ಅರೆಕಾಲಿಕ ವೃತ್ತಿ ಆಧಾರಿತ ಕೋರ್ಸುಗಳ ನೌಕರರನ್ನು, ಆತನಿಗೆ ನೇರವಾಗಿ ಅನ್ವಯಿಸಬಹುದಾದಂಥ ಕಾರಣಗಳಿಗಾಗಿ ಆತನು ಯಾವುದೇ ಸೇವಾಭಂಗವಿಲ್ಲದೆ ಐದು ವರ್ಷಗಳಿಗೆ ಕಡಿಮೆ ಇಲ್ಲದಂತೆ ನಿರಂತರವಾಗಿ ಕರ್ತವ್ಯ ನಿರ್ವಹಿಸಿದವರನ್ನು ಮಾತ್ರ ವಿಲೀನಕ್ಕೆ ಪರಿಗಣಿಸಲಾಗಿದೆ. ಈ ಅಧಿನಿಯಮ ಆರಂಭವಾದ ದಿನಾಂಕದಂದು ಐದು ವರ್ಷಗಳ ಸೇವೆಯನ್ನು ಪೂರ್ಣಗೊಳಿಸದ ಅರೆಕಾಲಿಕ ವೃತ್ತಿ ಶಿಕ್ಷಣ ಆಧಾರಿತ ಕೋರ್ಸುಗಳ ನೌಕರರನ್ನು ಯಾವುದೇ ಸರ್ಕಾರಿ ಸೇವೆಯಲ್ಲಿ ಅಥವಾ ಯಾವುದೇ ಖಾಸಗಿ ಅನುದಾನಿತ ಸಂಸ್ಥೆಯಲ್ಲಿ ಮುಂದುವರೆಸತಕ್ಕದ್ದಲ್ಲ ಅಥವಾ ವಿಲೀನಗೊಳಿಸತಕ್ಕದ್ದಲ್ಲ ವೆಂಬ ನಿಯಮವಿರುವುದರಿಂದ, ದಿನಾಂಕ:06/04/2011ಕ್ಕೆ ನಿರಂತರವಾಗಿ ಐದು ವರ್ಷ ಪೂರೈಸದ 530 ಜೆ.ಓ.ಸಿ ಬೋಧಕ ಮತ್ತು ಬೋಧಕೇತರರನ್ನು ವಿಲೀನಕ್ಕೆ ಪರಿಗಣಿಸಲು ಸಾಧ್ಯವಿರುವುದಿಲ್ಲ, ಜೆ.ಓ.ಸಿ ವಿಲೀನ ವಿಧೇಯಕದ-2011ರಲ್ಲಿನ ನಿಯಮಗಳಂತೆ ಉಳಿದ ಅರೆಕಾಲಿಕ ವೃತ್ತಿ ಶಿಕ್ಷಣ ನೌಕರರನ್ನು ಬೇರೆ ಬೇರೆ ಇಲಾಖೆ/ಸಂಸ್ಥೆಗಳಲ್ಲಿ ವಿಲೀನಗೊಳಿಸಲಾಗಿದೆ.

**ಸಂಖ್ಯೆ: ಇಪಿ 34 ಟಿವಿಇ 2020**

(ಎಸ್.ಸುರೇಶ್ ಕುಮಾರ್)

ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಸಕಾಲ

ಸಚಿವರು